(ಸದನವು ಬೆಳಿಗ್ಗೆ 10.11 ಗಂಟೆಗೆ ಸಮಾವೇಶಗೊಂಡಿತು)

ವರದಿಗಳನ್ನೊಪ್ಪಿಸುವುದು

ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ) (ಅಧ್ಯಕ್ಷರು: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ) :- ಮಾನ್ಯ ಅಧ್ಯಕ್ಷರೆ. 2004-05ನೇ ಸಾಲಿನ ಮಹಿಳಾ ಮತ್ತು ಕಲ್ಯಾಣ ಸಮಿತಿಯ 16ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :- ವರದಿಯನ್ನೊಪ್ಪಿಸಲಾಯಿತು.

ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಅಧ್ಯಕ್ಷರ ಪರವಾಗಿ 2004-05ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಒಂದನೇ (ಮಧ್ಯಂತರ) ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಎನ್.ಎಸ್.ಬೋಸರಾಜು (ಮಾನ್ವಿ) (ಅಧ್ಯಕ್ಷರು: ಖಾಸಗಿ ಸದಸ್ಯರುಗಳ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿ) :- ಮಾನ್ಯ ಅಧ್ಯಕ್ಷರೇ. ಖಾಸಗಿ ಸದಸ್ಯರುಗಳ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಯ ನಾಲ್ಕನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು :- ವರದಿಯನ್ನೊಪ್ಪಿಸಲಾಯಿತು.

ಉಪ ಸಭಾಧ್ಯಕ್ಷರ ಚುನಾವಣೆ

ಶ್ರೀ ಡಿ.ಕೆ.ಶಿವಕುಮಾರ್ (ಸಾತನೂರು) :- ಮಾನ್ಯ ಅಧ್ಯಕ್ಷರೇ. ಶ್ರೀ ಎನ್.ವೈ.ಗೋಪಾಲಕೃಷ್ಣ ಅವರನ್ನು ವಿಧಾನ ಸಭೆಯ ಉಪ ಸಭಾಧ್ಯಕ್ಷರಾಗಿ ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಶ್ರೀ ಎನ್.ಎಸ್.ಬೋಸರಾಜು (ಮಾನ್ವಿ) :- ಮಾನ್ಯ ಅಧ್ಯಕ್ಷರೇ. ಶ್ರೀ ಎನ್.ವೈ.ಗೋಪಾಲಕೃಷ್ಣ ಅವರನ್ನು ವಿಧಾನ ಸಭೆಯ ಉಪ ಸಭಾಧ್ಯಕ್ಷರನ್ನಾಗಿ ಚುನಾಯಿಸಬೇಕೆಂದು ಶ್ರೀ ಡಿ.ಕೆ.ಶಿವಕುಮಾರ್‌ರವರು ಸೂಚಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.